(ಅ) ಬಂಗಾರ ಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್ ಸಾವು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಲ್ಲ, ಈ ಬಂಗಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಏನು ಲಾಕಪ್ ಡೆತ್ ಆಗಿತ್ತು ಅದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಸವಿಸ್ತಾರವಾದಂಥ ಉತ್ತರವನ್ನು ಕೊಟ್ಟರು. ಆದರೆ ಇವತ್ತು ಪತ್ರಿಕೆಯಲ್ಲಿ ಏನು ಬಂದಿದೆ ಎಂದರೇ, ಅಲ್ಲಿರತಕ್ಕಂಥ ಮಿಸ್ಟರ್ ಕೋನಪ್ಪರೆಡ್ಡಿ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಏನಿದ್ದಾರೆ,

ಉಪಾಧ್ಯಕ್ಷರು :- ತಾವು ಇದನ್ನು ಈ ಶೂನ್ಯ ವೇಳೆ ಪ್ರಸ್ತಾಪ ಮಾಡುತ್ತಿದ್ದೀರಾ? ಇಲ್ಲ, ಇಲ್ಲಿ ಏನಾಗಿದೆ ಎಂದರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಹೌದು, ಅಧ್ಯಕ್ಷರೇ, ಇದು ಶೂನ್ಯ ವೇಳೆಯೇ, ನಾವು ಮಧ್ಯದಲ್ಲಿ ಇದ್ದೇವೆ ಆ ಕಡೆಯೂ ಇಲ್ಲ, ಈ ಕಡೆಯೂ ಇಲ್ಲ, ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ ಎರಡೇ ನಿಮಿಷದಲ್ಲಿ ನೀವು ನಿಲ್ಲಿಸಿ ಎಂದು ಹೇಳಿದರೆ ನಾನು ನಿಲ್ಲಿಸಿ ಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ, ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಕೋನಪ್ಪರೆಡ್ಡಿ ಎಂಬುವರು ಅಲ್ಲಿ ಏನಿದ್ದರು, ಅವರು ಇವತ್ತು ಡೆಕನ್ ಹೆರಾಲ್ಡ್ ಪತ್ರಿಕಾ ವರದಿಯನ್ನು ನಾನು ನೋಡಿದ ಪ್ರಕಾರ ``Sub-Inspector Konnappa Reddy is said to be related to a state minister, Sub-Inspector Ramamurthy and constables Anjanappa, Venkatapathy and Narayanaswamy..." ಇವರೇನು ಅಕ್ಯುಸ್ಡ್ ಇದ್ದಾರೆ, ಈ ಐದು ಜನ ಅಕ್ಯೂಸ್‌ನಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರ್ ಮಂತ್ರಿಗಳ ಸಂಬಂಧಿ ಎಂದು ಇವತ್ತು ಬಂದಿದೆ. ಅಂದರೆ, ಅವರು ಯಾವ ಮಂತ್ರಿಗಳು? ಏನು ಆ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾಮಂತ್ರಿಗಳ ಸಂಬಂಧಿಕರೊ? ಆ ಜಿಲ್ಲೆಯ ಹೊರಗಡೆ ಇರತಕ್ಕಂಥವರಿಗೆ ಸಂಬಂಧಪಟ್ಟಂಥ ಯಾರಾದರೂ ಮಂತ್ರಿಗಳಿದ್ದಾರೊ? ಏಕೆಂದರೆ, ಮಂತ್ರಿಗಳಿಗೆ ನೇರವಾಗಿ ಸಂಬಂಧಪಟ್ಟಂಥ ಸಬ್ ಇನ್‌ಸ್ಪೆಕ್ಟರ್ ಇದ್ದರೆ, ಅವರ ಸಂಬಂಧಿಕರಿದ್ದರೆ ಸ್ವಾಭಾವಿಕವಾಗಿ ಅವರನ್ನು ರಕ್ಷಣೆ ಮಾಡತಕ್ಕಂಥ ಎಲ್ಲಾ ತಂತ್ರಗಳು ನಡೆಯುತ್ತವೆ. ಈಗಾಗಲೇ ತಾವು ಹೇಳಿಕೆಯನ್ನು ಏನು ಕೊಟ್ಟಿದ್ದೀರೆಂದರೆ, ಇವತ್ತು ಅವರು ತಲೆಮರಿಸಿಕೊಂಡುದ್ದಾರೆನ್ನುವ ಮಾತನ್ನು ಹೇಳಿದ್ದೀರಿ. ಅಂದರೆ ಸಬ್ ಇನ್‌ಸ್ಪೆಕ್ಟರ್ ತಲೆಮರಿಸಿಕೊಂಡಿದ್ದಾರೆ, ಮೂವರು ಕಾನ್‌ಸ್ಟೇಬಲ್ಸ್ ತಲೆಮರಿಸಿಕೊಂಡಿದ್ದಾರೆ, ಯಾರು ಇವತ್ತಿನ ದಿವಸ ಇದನ್ನು ಮಾಡಿ ಹೋಗಿದ್ದಾರೆ, ಆ ಒಂದು ಲಾಕಪ್ ಡೆತ್‌ಗೆ ಕಾರಣಕರ್ತರಿದ್ದಾರೆ, ಇವತ್ತು ಅವರು ತಲೆಮರಿಸಿಕೊಂಡು ಇರಬೇಕೆಂದರೆ, ನನಗೆ ತಿಳಿದಮಟ್ಟಿಗೆ ಇವತ್ತೇನು ಪತ್ರಿಕೆಯಲ್ಲಿ ಬಂದಿದೆ ಆ ಸಂಶಯಮೂಡುತ್ತಿದೆ; ಇದರ ಹಿಂದೆ ಆ ಮಂತ್ರಿಗಳ ಕುಮ್ಮಕ್ಕು ಇರಬೇಕು ಎನ್ನತಕ್ಕಂಥದ್ದು ಇದರಿಂದ ಸ್ಪಷ್ಟವಾಗುತ್ತದೆ. ಅದಕ್ಕಾಗಿ ಆ ಮಂತ್ರಿಗಳು ಯಾರು? ಇದು ಯಾರ ಕುಮ್ಮಕ್ಕಿನಿಂದ ಅಲ್ಲಿ ಆಯಿತು? ಏಕೆಂದರೆ ಅಲ್ಲಿ ನಂಜಪ್ಪ ಎಂಬುವ ಭೂಮಾಲೀಕರು ಯಾರಿದ್ದರು, ಆ ಭೂ ಮಾಲೀಕರು ಕೂಡ ಬಹಳ

ಇನ್‌ಫ್ಲುಯೆನ್ಷಿಯಲ್ ಪರ್ಸನ್ ಎನ್ನತಕ್ಕ ಮಾತೂ ಸಹ ಇವತ್ತು ಪತ್ರಿಕೆಯಲ್ಲಿ ಬಂದಿದೆ. ವೇಣುಗೋಪಾಲಪುರ ಹಳ್ಳಿಯ ಶ್ರೀಮಾನ್ ನಂಜಪ್ಪ ಎನ್ನತಕ್ಕಂಥವರು ಬಹಳ ದೊಡ್ಡ ಇನ್ ಫ್ಲುಯೆನ್ಶ್ಯಲ್ ಮನುಷ್ಯ, ಅವರ ಇನ್‌ಫ್ಲುಯೆನ್ಶ್ಯಲ್‌ನಲ್ಲಿ ಬಂದು ಸಬ್ ಇನ್‌ಸ್ಪೆಕ್ಟರ್ ಈ ರೀತಿಯಾಗಿ ಹೊಡೆದು ಬಡಿದು, ಆರುನೂರು ರೂಪಾಯಿಗಳ ಒಂದು ಟ್ಯಾಮೊಟೊ ಸ್ಯಾಫ್ಲಿಂಗ್ ತೆಗೆದುಕೊಂಡು ಹೋಗಿದ್ದಾನೆಂದು ಕಳ್ಳತನವನ್ನು ಹೊರೆಸಿ, ಹೊಡೆದು ಅವನನ್ನು ಕೊಂದಿದ್ದಾರೆ. ಕೊಂದ ಮೇಲೆ, ಪೋಲಿಸರು ಇಲ್ಲಿಯವರೆಗೆ ಅವರನ್ನು ಟ್ರೇಸ್‌ಔಟ್ ಮಾಡುವುದರಲ್ಲಿ, ಹಿಡಿಯುವುದರಲ್ಲಿ, ಅರೆಸ್ಟ್ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಈ ಮಧ್ಯೆ ಒಂದು ಹೊಸ ಇನ್‌ವೆಸ್ಟಿಗೇಷನ್ ಏನಾಗಿದೆ ಎಂದರೆ, ಅವರು ಯಾರೊ ಮಂತ್ರಿಗಳಿಗೆ ಸಂಬಂಧಪಟ್ಟತಕ್ಕಂಥವರಾಗಿದ್ದಾರೆ ಎನ್ನತಕ್ಕಂಥ ಮಾತು ಬಂದಿದೆ. ಆದಕ್ಕಾಗಿ ದಯವಿಟ್ಟು ಅವರು ಯಾರು ಮಂತ್ರಿಗಳು? ಇದರಿಂದ ಏನಾಗುತ್ತದೆಂದರೆ ನಿಷ್ಪಕ್ಷಪಾತವಾದ ತನಿಖೆ ಆಗುವುದಿಲ್ಲ. ದಯವಿಟ್ಟು ಈ ತನಿಖೆಯನ್ನು ತಾವು ಸಿಬಿಐಗೆ ಒಪ್ಪಿಸಿ. ಇಲ್ಲವೆಂದರೆ ನಾಳೆ ಮಂತ್ರಿಗಳ ಸಂಬಂಧಿಕರಿದ್ದಾರೆಂದರೆ all sorts of pressures will be there. ಎಲ್ಲವೂ ಕೂಡ ಬರುತ್ತದೆ. ಆದಕ್ಕಾಗಿ ಆ ಮಂತ್ರಿಗಳು ಯಾರು ಎನ್ನತಕ್ಕಂಥದ್ದನ್ನು ಹೇಳಬೇಕು, ಎಷ್ಟರಮಟ್ಟಿಗೆ ಅವರ ಇನ್‌ಫ್ಲುಯೆನ್ಸ್ ಇದೆ, ಯಾವ ಸಂಬಂಧವಿದೆ ಎನ್ನುವುದನ್ನೆಲ್ಲಾ ಸಂಪೂರ್ಣವಾಗಿ ಬಹಿರಂಗಪಡಿಸಬೇಕು ಮತ್ತು ಈ ತನಿಖೆಯನ್ನು ಸಿಬಿಐನವರಿಗೆ ಹಸ್ತಾಂತರ ಮಾಡಬೇಕು; if this is true. ಆದಕ್ಕೆ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. very specific. ಅವರು ಯಾರ ಮಂತ್ರಿಯಾಗಲಿ, ಅವರು ಯಾರ ಸಂಬಂಧಿಕರಾಗಲಿ, ಆ ಯಾರು ಮಂತ್ರಿ ಇದ್ದಾರೆ ಯಾರ ಸಂಬಂಧಿ ಎನ್ನುವುದನ್ನು ನಾನು ವಿಚಾರಿಸಿ ತಮಗೆ ಹೇಳುತ್ತೇನೆ. ಅವರು ಯಾರೆ ಮಂತ್ರಿಯಾಗಿದ್ದರು, this case has been entrusted to COD. ಸಿಓಡಿಯವರು ಎಕ್ಸಾಮಿನ್ ಮಾಡುತ್ತಿದ್ದಾರೆ. ನಾವು ಅವನು ಎಲ್ಲೇ ಇದ್ದರು ಹಿಡಿದುಹಾಕುತ್ತೇವೆ. ಮಂತ್ರಿಗಳ ಸಂಬಂಧಿಕರಿದ್ದಾರೆಯೇ ಇಲ್ಲವೆ ಎನ್ನುವುದು ನನಗೆ ಗೊತ್ತಿಲ್ಲ, ವಿಚಾರ ಮಾಡಿ ನಾನು ನಿಮಗೆ ಹೇಳುತ್ತೇನೆ. ಯಾರ ಸಂಬಂಧಿಕರಾಗಿದ್ದರೂ, we will see to it that he is arrested. According to law what action has to be taken, will be taken. Under Sec. 302 and 342, case has been booked. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಯಾರ ಮಂತ್ರಿಗಳು ಸಂಬಂಧಿಕರಾಗಿರಲಿ, ಇನ್ನೊಬ್ಬರು ಅವನ್ಯಾರೊ ನಂಜಪ್ಪ ಎನ್ನತಕ್ಕಂಥ ಇನ್‌ಫ್ಲುಯೆನ್ಶ್ಯಲ್ ವ್ಯಕ್ತಿ ಇರಲಿ, ನಾವು ಯಾರಿಗೂ ನೋಡುವುದಿಲ್ಲ, ಇವನನ್ನು ಹಿಡಿಯುತ್ತೇವೆಂದು ನಾನು ಅವರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನುಜಪ್ಪನೂ ಓಡಿಹೋಗಿದ್ದಾನೆ. ನೀವು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೀರಿ, ನೀವು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅವರೆಲ್ಲಾ ಒಬ್ಬೊಬ್ಬರಾಗಿ ಓಡಿ ಹೋಗಿದ್ದಾರೆ. ನಾನು ನಿರ್ದಿಷ್ಟವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ, he is related to a minister ಎಂದು ಬಂದ ಮೇಲೆ, ನಾಳೆ ಇದನ್ನು ಮುಂದೂಡತಕ್ಕಂಥದ್ದು ಆಗಬಾರದೆಂದು ಹೇಳುತ್ತಿದ್ದೇನೆ, ಅವರು ಯಾವ ಮಂತ್ರಿ ಎನ್ನತಕ್ಕಂಥದಾರೂ ಹೇಳಿ. who is that man !

ಉಪಾಧ್ಯಕ್ಷರು :- ಇಲ್ಲ, ಅವರ ಹತ್ತಿರ ಮಾಹಿತಿ ಇಲ್ಲ ತರಿಸಿ ಹೇಳುತ್ತೇನೆಂದು ಹೇಳುತ್ತಿದ್ದಾರೆ ಕೇಳಿ.....

ಶ್ರೀ ಆರ್. ರೋಷನ್ ಬೇಗ್ :- ಮಾಹಿತಿ ಇಲ್ಲ, ಮಾಹಿತಿ ತರಿಸಿ ಹೇಳುವುದಕ್ಕೆ ನಮಗೆ ಸ್ವಲ್ಪ ಸಮಯ ಕೊಡಿ. ಸಭಾಧ್ಯಕ್ಷರೇ ನಾವು ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಅದು ನಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು ಅದಕ್ಕೆ ನಾನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು :- ಸಂಕ್ಷಿಪ್ತವಾಗಿ ತಾವು ಎರಡೇ ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಕಳೆದ ಸಲ ಶೂನ್ಯ ವೇಳೆಯಲ್ಲಿ ವಿರೋಧಪಕ್ಷದ ಮುಖಂಡರು ಮತ್ತು ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ, ಮಾನ್ಯ ಗೃಹಮಂತ್ರಿಗಳು ಮೂರು ದಿವಸಗಳೊಳಗಾಗಿ ಯಾರು ಓಡಿ ಹೋಗಿದ್ದಾರೆ ಅವರನ್ನು ಹಿಡಿಯುತ್ತೇವೆಂದು ಹೇಳಿದ್ದರು. ಇದುವರೆವಿಗೂ ಯಾರನ್ನು ಹಿಡಿದಂಥ ಮಾಹಿತಿ ಇಲ್ಲ. ಇವತ್ತಿನ ಪತ್ರಿಕೆಗಳ ಮಾಹಿತಿಯ ಪ್ರಕಾರ, ಮೊನ್ನೆ ಮಂತ್ರಿಗಳು, ನಾವು ಅವರ ಕುಟುಂಬಕ್ಕೆ ಪರಿಹಾರ ಇಪ್ಪತ್ತೆದು ಸಾವಿರವೊ, ಐವತ್ತು ಸಾವಿರ ರೂಪಾಯಿಗಳನ್ನೊ ಕೊಡುತ್ತೇವೆಂದು ಹೇಳುತ್ತಿದ್ದರು. ಆ ಕುಟುಂಬ ಇವತ್ತು 18 ಜನರನ್ನೊಳಗೊಂಡಿರುವ ಕುಟುಂಬ, ಆ 18 ಜನರನ್ನು ಆತನೊಬ್ಬನೇ ಸಂಪಾದನೆ ಮಾಡಿ ನೋಡಿಕೊಳ್ಳುತ್ತಾ ಇದ್ದವನು. ಅದಕ್ಕೆ ಇಡೀ ಕುಟುಂಬ ಜೀವನ ಮಾಡತಕ್ಕಂಥ ವ್ಯವಸ್ಥೆಯಾಗಬೇಕಾಗಿರುವ ಪರಿಹಾರವನ್ನು ಸರ್ಕಾರ ಕೊಡಬೇಕಾಗುತ್ತದೆ. ಎರಡನೆಯದು ಯಾರು ಮಂತ್ರಿಗಳು ಅವರಿಗೆ ಸಂಬಂಧಕರಿದ್ದಾರೆ ಎನ್ನುವುದನ್ನು ಈಗ ಸಧ್ಯಕ್ಕೆ ಇಲ್ಲದಿದ್ದರೆ ಮಾಹಿತಿ ತರಿಸಿ ಅದನ್ನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ :- ಆಯಿತು, ನಾನು ಅವರ ಮಾತನ್ನು ಒಪ್ಪಿದ್ದೇನೆ ;